ಒದುಗರ ಓಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಳೆಗೆ ದ್ವೀಪದಂತಾಗುವ ನಗರ

ಬೆಂಗಳೂರಿನಲ್ಲಿ ಸಾಧಾರಣ ಮಳೆಯಾದರೆ ಸಾಕು ದ್ವೀಪದಂತೆ ಬದಲಾಗುತ್ತದೆ. ರಸ್ತೆಗಳ ತುಂಬಾ ಚರಂಡಿ ನೀರು ಹರಿದು ವಾಹನಗಳ ಓಡಾಟವೇ ಅಸಾಧ್ಯವಾದಂತಾಗಿ ಜನ-ಜೀವನ ಅಸ್ತವ್ಯಸ್ತವಾಗಿಬಿಡುತ್ತದೆ. ಬೆಂಗಳೂರು ಒಂದರಲ್ಲೇ ಕಳೆದ ಐದು ವರ್ಷಗಳಲ್ಲಿ ಮಳೆಯ ಅಬ್ಬರಕ್ಕೆ 10-15 ಜೀವಗಳು ಬಲಿಯಾಗಿವೆ ನೂರಾರು ವಾಹನಗಳು ಮರದಡಿ ಸಿಕ್ಕು ನುಜ್ಜುಗುಜ್ಜಾಗಿವೆ. ಮುಂಗಾರು ಮಳೆಯ ಪ್ರವೇಶಕ್ಕೆ ಸಜ್ಜಾಗಿರುವ ಹೊತ್ತಿನಲ್ಲೇ ಬಿಬಿಎಂಪಿ 27 ಡೇಂಜರ್ ವಲಯಗಳನ್ನು ಗುರುತಿಸಲಾಗಿದೆ. ಕಳೆದ ವರ್ಷ ತನುಶ್ರೀ ಎಂಬ ಎರಡೂವರೆ ವರ್ಷದ ಮಗು ಮಳೆನೀರಿಗೆ ಕೊಚ್ಚಿಕೊಂಡು ಹೋಗಿದ್ದು ನೆನಪಿರಬಹುದು. ಬೆಂಗಳೂರು ನಿವಾಸಿಗಳು ಎಚ್ಚರಿಕೆಯಿಂದ ಇರಬೇಕು. ಮಳೆಗಾಲದಲ್ಲಿ ಮರದಡಿ ನಿಲ್ಲುವುದಾಗಲಿ, ಕೆಲವು ಡೇಂಜರಸ್ ಬ್ರಿಡ್ಜ್ ಕೆಳಗೆ ಓಡಾಡುವುದಾಗಲಿ ನಿಲ್ಲಿಸಬೇಕು. ಬೆಂಗಳೂರಲ್ಲಿ ಒಟ್ಟು 842 ಕಿಮೀ ಉದ್ದ ರಾಜಕಾಲುವೆಗಳಿವೆ ಇಲ್ಲೆಲ್ಲ ತಂತಿಬೇಲಿ ಅಳವಡಿಸಿದರೂ, ಅವುಗಳು ಕೆಲವೆಡೆ ಕಿತ್ತು ಹೋಗಿವೆ. ಪ್ರತಿ ವರ್ಷ ಮಳೆಗಾಲದ ಕಾಮಗಾರಿಗಾಗಿಯೇ ಬಿಬಿಎಂಪಿ ಕೋಟ್ಯಂತರ ರುಪಾಯಿ ಖರ್ಚು ಮಾಡುತ್ತಿದೆ. ಆದರೆ ಪ್ರವಾಹಪೀಡಿತ ಪ್ರದೇಶಗಳಲ್ಲಿ ಅಭಿವೃದ್ಧಿ ಸ್ವಲ್ಪವೂ ಕಾಣಿಸದಿರುವುದು ಅಚ್ಚರಿ ಮೂಡಿಸುತ್ತದೆ.

- **ಮುನಿಯ**, ಬನಶಂಕರಿ

ಬೆರಳತುದಿಯಲ್ಲೇ ಮಾಹಿತಿ

ರಾಜ್ಯದ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಲಭ್ಯವಿರುವ ಕೋರ್ಸ್‌ಗಳು, ಪ್ರಾಧ್ಯಾಪಕರು, ತರಗತಿ ವೇಳಾಪಟ್ಟಿ ಇತರೆ ಸೌಲಭ್ಯಗಳ ಮಾಹಿತಿಗಾಗಿ ಈಗ ಕಾಲೇಜುಗಳಿಗೆ ಅಲೆಯುವಂತಿಲ್ಲ. ಈ ಎಲ್ಲ ಮಾಹಿತಿಗಳು ಇನ್ನು ಮುಂದೆ ಬೆರಳ ತುದಿಯಲ್ಲೇ ಸಿಗಲಿದೆ. 2019-20ನೇ ಸಾಲಿನಲ್ಲಿ ಕಾಲೇಜುಗಳಿಗೆ ದಾಖಲಾತಿ ಪಡೆಯುವ ವಿದ್ಯಾರ್ಥಿಗಳು ಈಗ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲೇ ಪಡೆಯಬಹುದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಪದೇಪದೆ ಅಲೆಯುವುದು ತಪ್ಪಿದಂತಾಗಿದೆ. ರಾಜ್ಯದ 412 ಸರಕಾರಿ ಕಾಲೇಜುಗಳ ವೆಬ್‌ಸೈಟ್ ಒಂದನ್ನು ಸಿದ್ಧಪಡಿಸಿದ್ದು, ಇಲಾಖೆಯ ಅಂತರ್ಜಾಲ ತಾಣದಲ್ಲಿ ಲಿಂಕ್‌ನ್ನು ಉಪಯೋಗಿಸಿಕೊಂಡು ತಮಗೆ ಬೇಕಾದ ಕೋರ್ಸ್, ಕಾಲೇಜುಗಳ ಮಾಹಿತಿಯನ್ನು ಪಡೆಯಬಹು ದಾಗಿದೆ. ಆದರೆ ಕಾಲೇಜು ಸೇರಬಯಸುವ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಈ ಸಾಲಿನ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಲಭ್ಯವಿರುವುದಿಲ್ಲ. ಏಕೆಂದರೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಜಾಲತಾಣವನ್ನು ಸಿದ್ಧಪಡಿಸುತ್ತಿದ್ದು. ಮುಂದಿನ ಶೈಕ್ಷಣಿಕ ವರ್ಷಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸಲು ಲಭ್ಯವಾಗಬಹುದು.

-**ಅಮರೇಶ**, ಯಾದಗಿರಿ

ಪಾಳು ಬಂಗಲೆಯಂತಾಗಿರುವ ಶಿಕ್ಷಕ ತರಬೇತಿ ಕಾಲೇಜು

ಸುಮಾರು ಮೂವತ್ತರಿಂದ ನಲವತ್ತು ವರ್ಷಗಳ ಕಾಲ ಹಳೆಯ ಈ ಟಿಸಿಎಚ್ ಕಾಲೇಜ್ ಇರುವುದು ಮಳವಳ್ಳಿ ಪಟ್ಟಣದಲ್ಲಿ. ಈ ಕಟ್ಟಡವು ಪುರಸಭೆ ಆಸ್ತಿ ಸಹ ಆಗಿದ್ದರೂ ಮೂವತ್ತು ನಲವತ್ತು ವರ್ಷಗಳಿಂದ ಆಡಳಿತ ನಡೆಸಿದ ಸದಸ್ಯ ರುಗಳ ಅವಜ್ಞೆಗೆ ತುತ್ತಾಗಿದೆ. ಇಲ್ಲಿ ಕಲಿತ ಶಿಕ್ಷಕರಾದರೂ ಸ್ವಲ್ಪ ಸ್ವಲ್ಪ ಹಣ ಶೇಖರಣೆ ಮಾಡಿ ಪುರಸಭೆ ಆಡಳಿತ ನಡೆಸುವ ಸದಸ್ಯರುಗಳಿಗೆ ಅದನ್ನು ನೀಡಿ,ಸರಕಾರದ ಅನುದಾನ ತಂದು ಈ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿ ಎಂದು ಹೇಳದಿರುವುದು ದುರ್ದೈವ. ಯಾರಿಗೂ ಕಟ್ಟಡದ ಮಹತ್ವ ಗೊತ್ತಿಲ್ಲವಾಗಿದೆ. ಇಂತಹ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡಿ ಅದರ ಹೆಸರನ್ನು ಉಳಿಸಬೇಕು ಎಂಬ ಅರಿವು ಸಹ ಪುರಸಭೆ ಸದಸ್ಯರಿಗೆ ಇಲ್ಲವಾಗಿದೆ. ಇದೇ 29 ರಂದು ಪುರಸಭೆಯ ಚುನಾವಣೆ ಬರುತ್ತಿದೆ . ಪಟ್ಟಣದ ಮತದಾರರು ಇವುಗಳನ್ನು ಗಮನಿಸಿ ಜನಪ್ರತಿನಿಧಿಗಳಿಗೆ ತಕ್ಕ ಪಾಠ ಕಲಿಸಿಯಾರೇ?

-**ಎಸ್.ಮಂಜು**, ಮಳವಳ್ಳಿ

ಪಶುವೈದ್ಯರ ಸಂಖ್ಯೆ ಕಡಿಮೆ ಇರಬಹುದು, ಸೇವೆಯಲ್ಲ!



ಬಹುಶಃ ಪ್ರಥಮ ಬಾರಿಗೆ ‘ವಿಶ್ವವಾಣಿ’ಯಲ್ಲಿ 11ಮೇ ಸಂಚಿಕೆಯಲ್ಲಿ ಪಶುವೈದ್ಯ ಕ್ಷೇತ್ರದ ಬಗ್ಗೆ ಬಂದ ಒಂದು ವಿಶ್ಲೇಷಣಾತ್ಮಕ ಲೇಖನ (ನಮ್ಮ ಗಣ್ಯ-ಮಾನ್ಯರಲ್ಲಿ ಪಶುವೈದ್ಯರೇಕೆ ಮೈನಾರಿಟಿ?)ಕ್ಕಾಗಿ ಅಭಿನಂದನೆಗಳನ್ನು ತಿಳಿಸುತ್ತಾ ಕೆಲ ಸ್ಪಷ್ಟೀಕರಣಗಳನ್ನೂ ನೀಡಬಯಸುತ್ತೇನೆ. ಪಶುವೈದ್ಯಕೀಯ ಕ್ಷೇತ್ರ ಹಿಂದೆಯೂ, ಇಂದೂ ಮತ್ತು ಬಹುಶಃ ಮುಂದೂ ‘ಸೆಕೆಂಡ್ ಬೆಸ್ಟ್’ ಆಯ್ಕೆಗೆ ಸೀಮಿತವಾಗಿಲ್ಲ. ಪ್ರಯತ್ನಪಟ್ಟು ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯಬಹುದು. ಆದರೆ ಸೀಮಿತ ಸೀಟುಗಳಿರುವ ಪಶುವೈದ್ಯಕೀಯ ಕೋರ್ಸ್‌ನಲ್ಲಿ ನಿಜಕ್ಕೂ ಅರ್ಹತೆ ಇರುವವರಿಗೆ ಮಾತ್ರ ಪ್ರವೇಶ. ನಮ್ಮಲ್ಲಿ ಯಾವುದೇ ಖಾಸಗಿ ವೆಟರಿನರಿ ಕಾಲೇಜುಗಳಿಲ್ಲ ಎಂಬುದನ್ನು ಗಮನಿಸಬೇಕು. ಕರ್ನಾಟಕ ಪಶುವೈದ್ಯ ಪರಿಷತ್ತಿನಲ್ಲಿ ನೊಂದಾಯಿತ ಸದಸ್ಯರ ಸಂಖ್ಯೆ ಸುಮಾರು 5000 ಅಷ್ಟೇ. ಇಂದು ನಗರ ಪ್ರದೇಶಗಳ ಲ್ಲಿರುವ ವೆಟರಿನರಿ ಚಿಕಿತ್ಸಾಲಯಗಳು ಎಕ್ಸ್‌ರೇ, ಅಲ್ಟ್ರಾಸೌಂಡ್, ಇಸಿಜಿ ಇತ್ಯಾದಿ ಎಲ್ಲ ಆಧುನಿಕ ತಂತ್ರಜ್ಞಾನ ಸೌಲಭ್ಯ ಬಳಸಿ ಸಾಕು ಪ್ರಾಣಿಗಳನ್ನು ಉಪಚರಿಸುತ್ತವೆ. ಇನ್ನು ಗಣ್ಯ- ಮಾನ್ಯರಲ್ಲಿಯೂ ಹಲವು ಪಶುವೈದ್ಯರನ್ನು ನೆನಪಿಸಿಕೊಳ್ಳಬ ಹುದು. ಸಹಕಾರ ಸಚಿವ ಬಂಡೆಪ್ಪ ಕಾಶಂಪುರ ಒಬ್ಬ ಪಶುವೈದ್ಯರು. ಲೇಖನದಲ್ಲಿ ಹೇಳಿರುವಂತೆ ಪ್ರಾಣಿದಯಾಸಂಘದವರಷ್ಟು ಪಶುವೈದ್ಯರು ಪ್ರಸಿದ್ಧಿಗೆ ಬಂದಿಲ್ಲದಿದ್ದರೂ ಪ್ರಾಣಿಗಳ ಹಕ್ಕುಗಳ ಸಂರಕ್ಷಣೆ ಬಂದಾಗ ಹೋರಾಟಕ್ಕೆ ಇಳಿಯದೇ ಉಳಿಯುವುದಿಲ್ಲ.

- **ಡಾ.ಸಿ.ಎಸ್. ಅರುಣ್**, ಮೈಸೂರು

ಈ ನತದೃಷ್ಟ ಜಿಲ್ಲೆಗಳ ಗಾಳಿಯೂ ಭ್ರಷ್ಟಾಚಾರದಿಂದ ಸೋಂಕಿತ!

‘ಭ್ರಷ್ಟಾಚಾರ’ ತೊಂಬತ್ತರ ದಶಕದಲ್ಲಿ ಮಾಧ್ಯಮಗಳಿಗೆ ಒಂದು ಕುತೂಹಲದ ಮತ್ತು ಸಂವಾದದ ಚರ್ಚಾ ವಿಷಯವಾಗಿತ್ತು. ‘ಹವಾಲಾ’ ಹಗರಣ ಕುರಿತು ಚರ್ಚಿಸುವುದು ಪತ್ರಕರ್ತರಿಗೂ ಪ್ರತಿಷ್ಠೆಯ ವಿಷಯವಾಗಿತ್ತು. ಆದರೆ, ಇಂದು ‘ಭ್ರಷ್ಟಾಚಾರ ಎಲ್ಲಿಲ್ಲ ಹೇಳಿ?’ ಎಂದು ಪ್ರಶ್ನಿಸುವವರಿಗೆ ಹೇಗೆಂದು ಉತ್ತರಿಸಬೇಕು ಎಂದು ಗಲಿಬಿಲಿಯಾಗುತ್ತದೆ. ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಭ್ರಷ್ಟಾಚಾರ ಎಗ್ಗಿಲ್ಲದೇ ನಡೆದಿರುವುದನ್ನು ಮತ್ತು ನಡೆಯುತ್ತಿರುವುದನ್ನು ಕಾಣಬಹುದು ಎಂಬುದಾಗಿ ಅವರಿವರ ಬಾಯಲ್ಲಿ ಕೇಳುತ್ತಿದ್ದ ನನಗೆ, ಈ ಸಂಬಂಧ ಪ್ರತ್ಯಕ್ಷ ವರದಿ ಮಾಡಹೋದಾಗ ಆದ ಅನುಭವಗಳು ಆಘಾತಕಾರಿ ಎಂದರೆ ಬಹಳ ಸೌಮ್ಯವಾಗಿ ಹೇಳಿದಂತೆ. ರಾಜ್ಯದ ತೀರಾ ಹಿಂದುಳಿದ ಹಣೆಪಟ್ಟಿ ಹೊತ್ತ ಯಾದಗಿರಿಗೆ ವಾಸ ಸ್ಥಳಾಂತರಿಸಿದೆ.

ಮೂರು ತಿಂಗಳಲ್ಲಿ ನನ್ನ ಬದುಕು ಹಣ್ಣುಗಾಯಿ ನೀರುಗಾಯಿ ಆಯಿತು! ಮಲ್ಲಿಕಾರ್ಜುನ ಖರ್ಗೆಯಂತಹ ಮಹಾನ್ ನಾಯಕರಿಗೆ 50 ವರ್ಷಗಳ ಸುದೀರ್ಘ ರಾಜಕೀಯ ಜೀವನ ಕಲ್ಪಿಸಿದ ಗುರುಮಠಕಲ್ ಪಟ್ಟಣ ಥೇಟ್ ಕುಗ್ರಾಮದಂತೆ ಕಂಡಿತು. ಖರ್ಗೆ ಸಂಸದರಾಗಿ ದತ್ತು ಪಡೆದುಕೊಂಡಿರುವ ಕೊಂಕಲ್ ಗ್ರಾಮ ರೋಗಿಷ್ಠವಾಗಿರುವಂತೆ ಭಾಸವಾಯಿತು. ಎಲ್ಲಿ ನೋಡಿದರೂ ರಸ್ತೆ ಮೇಲೆ ಅಡ್ಡಾದಿಡ್ಡಿಯಾಗಿ ಹರಿಯುವ ಚರಂಡಿಗಳು ಗಬ್ಬು ನಾರುತ್ತಿದ್ದವು. ಡಾಂಬರು ಕಾಣದ ರಸ್ತೆಗಳು ಧೂಳಿನಿಂದ ಆವರಿಸಿಕೊಂಡಿದ್ದವು. ಬೀದಿದೀಪಗಳ ಬೆಳಕಿಲ್ಲ. ಸೂರ್ಯ ಮರೆಯಾಗುತ್ತಿದ್ದಂತೆ ಕತ್ತಲಿನೊಂದಿಗೆ ಬ್ರಹ್ಮರಾಕ್ಷಸರಂತೆ ದಾಳಿ ಇಡುವ ಸೊಳ್ಳೆಗಳಿಂದ ಅಲ್ಲಿನ ಜನರು ರಕ್ಷಣೆ ಪಡೆಯಲು ನಿರಂತರ ಹೆಣಗುತ್ತಾರೆ. ಅದು ಅವರಿಗೆ ಸಾಮಾನ್ಯವಾಗಿಬಿಟ್ಟಿದೆ.

ತೆಲಂಗಾಣದ ಗಡಿಯಲ್ಲಿನ ನಾರಾಯಪೇಟೆ ದಾಟಿ ಗುರುಮಠಕಲ್ ಪ್ರವೇಶಿಸಿದಾಗ ಕಾಂಗ್ರೆಸ್ ಹಿರಿಯ ನಾಯಕರೊಬ್ಬರು ಪ್ರತಿನಿಧಿಸುವ ಗುರುಮಠಕಲ್ ಇದೇನಾ ಎನ್ನುವಂತೆ ದಿಗಿಲಾಯಿತು. ಗುರುಮಠಕಲ್ ಅಷ್ಟೇ ಅಲ್ಲ, ಹಿರಿಯ ನಾಯಕ ಡಾ.ಎ.ಬಿ. ಮಾಲಕರಡ್ಡಿ ಪ್ರತಿನಿಧಿಸುವ ಯಾದಗಿರಿ, ಶರಣಬಸಪ್ಪ ದರ್ಶನಾಪುರ ಮನೆತನವೇ ಎಡೆಬಿಡದೆ ಆಳುತ್ತಿರುವ ಶಹಾಪುರ, ರಾಜಮನೆತನದ ವಿರುದ್ಧ ಸಿಡಿದು ರಾಜಕೀಯ ಧ್ರುವೀಕರಣಗೊಳಿಸಿದ ರಾಜೂಗೌಡ (ನರಸಿಂಹ ನಾಯಕ) ಪ್ರತಿನಿಧಿಸುವ ಸುರಪುರ ಮತಕ್ಷೇತ್ರ ಕೂಡ ಅಭಿವೃದ್ಧಿಯ ಅಂಬೆಗಾಲಿಟ್ಟಿಲ್ಲ. ಇಲ್ಲಿ ಸುತ್ತಾಡಿದ ಮೇಲೆ ಈ ಪರಿಯ ಅನಭಿವೃದ್ಧಿಗೆ ಕಾರಣರಾಗಿರುವ ರಾಜಕಾರಣಿಗಳ, ಅಧಿಕಾರಿಗಳ ವಿರುದ್ಧ ಒಳಗೊಳಗೇ ಸಾತ್ವಿಕ ಸಿಟ್ಟು ಕಟ್ಟೆಯೊಡೆಯದೆ ಇರದು. ಆಗಾಗ ಇತರೆ ಜಿಲ್ಲೆಗಳ ಅಭಿವೃದ್ಧಿಯನ್ನು ಮೇಲಿನ ಕ್ಷೇತ್ರಗಳ ಅಭಿವೃದ್ಧಿಯ ಜತೆ ಹೋಲಿಕೆ ಮಾಡಿ ಚರ್ಚೆಗಿಳಿಯುವುದು ನನಗೊಂದು ಗೀಳಾಗಿಬಿಟ್ಟಿತು. ಆದರೆ ಅದೇ ನೆಲದ ಅನುಭವಿ ಪತ್ರಕರ್ತರೊಬ್ಬರು ನನ್ನನ್ನು ಕಂಡ ಕೂಡಲೇ,‘ಮತ್ತೇನು.. ಅಲ್ಲಿ (ನಿಮ್ಮಲ್ಲಿ) ಹೇಗಿದೆ? ಇಲ್ಲಿ (ಯಾದಗಿರಿ) ಹೇಗಿದೆ?’ ಎಂದು ಅಪಹಾಸ್ಯಕ್ಕೆ ಮುಂದಾಗಿಬಿಡುತ್ತಿದ್ದರು. ಈ ಕಠೋರ ಅವ್ಯವಸ್ಥೆಯನ್ನು ಅವರು ಲೀಲಾಜಾಲವಾಗಿ ಅರಗಿಸಿಕೊಂಡಿರುವುದು ಇನ್ನಷ್ಟು ಅಚ್ಚರಿ ಉಂಟುಮಾಡುತ್ತಿತ್ತು.

ಭ್ರಷ್ಟಾಚಾರ ಎಂಬುದು ಕೇವಲ ಅಧಿಕಾರಿಗಳು, ರಾಜಕಾರಣಿಗಳು ಕೊಳ್ಳೆಹೊಡೆದ ಸರಕಾರಿ ಹಣವಲ್ಲ. ಅಭಿವೃದ್ಧಿ ಹೆಸರಲ್ಲಿ ಸರಕಾರ ಇಲಾಖೆಗಳಿಗೆ ನೀಡುವ ಅನುದಾನವನ್ನು ಬಳಸದೇ ಖಜಾನೆಗೆ ಮರಳಿಸುವ ಅಧಿಕಾರಿಗಳ ನಿರ್ಲಕ್ಷ್ಯವೂ ಮಹಾ ಭ್ರಷ್ಟಾಚಾರವೇ. ಅಧೀನ ಅಧಿಕಾರಿಗಳು ಇಂಥ ಕೆಲಸವನ್ನು ಪ್ರತಿ ಆರ್ಥಿಕ ವರ್ಷದಲ್ಲಿ ಸಲೀಸಾಗಿ ಮಾಡುತ್ತಿದ್ದರೂ, ಪ್ರಶ್ನಿಸದ, ಪರಿಶೀಲಿಸದ ಹಿರಿಯ ಅಧಿಕಾರಿಗಳು ಕೂಡ ಕ್ರೂರ ಭ್ರಷ್ಟಾಚಾರಿಗಳೆಂದೇ ಭಾವಿಸಬಹುದು. ಇದನ್ನೆಲ್ಲಾ ಕಂಡರೂ ಕಾಣದಂತೆ ಎಸಿ ಕಾರುಗಳಲ್ಲಿ ತಿರುಗಾಡುವ ಜನಪ್ರತಿನಿಧಿಗಳೂ ಸಹ ಭ್ರಷ್ಟ ಪಿಪಾಸುಗಳೇ ಸರಿ. ಅದರ ವಿರುದ್ಧ ಲೇಖನಿ ಹರಿತಗೊಳಿಸಿದಾಗ ಮುಖ್ಯಸ್ಥರಿಂದ ‘ಹಾಗೆಲ್ಲ ಬರೆಯಬಾರದು’ ಎಂಬ ಆಜ್ಞೆಯಾಯಿತು.

ಸರಿ ಎಂದುಕೊಂಡು ಸಂಘಟನೆ, ರೈತ ಮುಖಂಡರ

ಪ್ರತ್ಯಕ್ಷ ನೋಟ

ಮಲ್ಲೇಶ ನಾಯಕನಹಟ್ಟಿ, ಚಿತ್ರದುರ್ಗ

vveditoped@gmail.com

ಹುಡುಕಾಟ ಶುರು ಮಾಡಿದೆ. ಪತ್ರಿಕೆಗಳಿಗೆ ಪೋಸು ನೀಡುವ ಸಂಘಟನೆಗಳ ಪದಾಧಿಕಾರಿಗಳು ಒಂದಷ್ಟು ಮಂದಿ ಸಿಕ್ಕರು. ಸುರಪುರದ ರೈತ ಮುಖಂಡರೊಬ್ಬರು,‘ನಿಮಗನಿಸಿದ್ದನ್ನೆಲ್ಲ ನನ್ನ ಹೆಸರಿನಲ್ಲಿ ಬರೆಯಿರಿ’ ಎಂದು ಸಮ್ಮತಿ ಕೂಡ ನೀಡಿದರು. ಆದರೆ, ಅವರೆಂದೂ ಪ್ರಶ್ನಿಸಲು ಡಿಸಿ ಕಚೇರಿಗೆ ಎಡತಾಕಲಿಲ್ಲ. ಕೆಲ ರೈತ ಮುಖಂಡರು ಪತ್ರಕರ್ತರಿಗೆ ಜಾಹೀರಾತು ನೀಡುವ ಮುಲಾಜಿಗೆ ಒಳಪಟ್ಟಿರುವುದನ್ನು ಕಂಡು ಹೌಹಾರುವಂತಾಯಿತು. ಒಬ್ಬರು ಬಾಯಿಬಿಟ್ಟರೆ ಬರೀ ದೆಹಲಿಯ ಕರ್ನಾಟಕ ಭವನದಲ್ಲಿ ಬಡಿಸುವ ಊಟ, ಉಪಚಾರದ ಕತೆ ಹೇಳುತ್ತಿದ್ದರು!

ವೃತ್ತಿಸಂಬಂಧಿತ ಕೆಲಸವಾಗಿ 56 ಇಲಾಖೆಗಳಿಗೆ ಎಡತಾಕಿದೆ. ಯಾವೊಂದು ಇಲಾಖೆಯೂ ಸರಕಾರ ನೀಡಿದ ಅನುದಾನ ಸದ್ವಿನಿಯೋಗ ಮಾಡಿದ್ದು ಕಾಣಲಿಲ್ಲ. ಪ್ರತಿ ವರ್ಷ 52 ಕೋಟಿ ರು. ಬಜೆಟ್ ಮಂಡಿಸುವ ಯಾದಗಿರಿ ನಗರಸಭೆ ಜನರಿಗೆ ಶುದ್ಧ ಕುಡಿಯುವ ನೀರು, ಸ್ವಚ್ಛ ರಸ್ತೆ, ಒಳಚರಂಡಿ ಸೌಕರ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಜಿಲ್ಲೆಯಾಗಿ ದಶಕದ ಹೊಸ್ತಿಲಿನಲ್ಲಿರುವ ಯಾದಗಿರಿ ನಗರಸಭೆ ಒಟ್ಟು ರು.400 ಕೋಟಿ ಬಜೆಟ್ ಮಂಡಿಸಿದೆ. ಆದರೆ, ನಗರದಲ್ಲಿ ಎಲ್ಲೂ ಒಂದು ಹುಲ್ಲುಕಡ್ಡಿಯಷ್ಟು ಬದಲಾವಣೆ ಕಾಣಿಸುವುದಿಲ್ಲ, ಹಾಗಾದರೆ, ಈ ಬೃಹತ್ ಮೊತ್ತ ಕರಗಿದ್ದು ಹೇಗೆ? ಯಾರ ಕಿಸೆ ಸೇರಿತು?!

‘ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ’ಯಡಿ ನಡೆದಿರುವ ಭ್ರಷ್ಟಾಚಾರ ಕುರಿತು ಲೆಕ್ಕಪತ್ರ, ಪರಿಶೀಲನೆ ತನಿಖಾ ಆದೇಶ ಹೊರಬಿದ್ದ ಮೇಲೆ ಅಧಿಕಾರಿಗಳ ಭ್ರಷ್ಟಾಚಾರ ಕುರಿತು ತನಿಖಾ ವರದಿ ಮೂಲಕ ಬೆಳಕು ಚೆಲ್ಲಿದೆ. ವರದಿ ಪ್ರಕಟವಾದ ದಿನದಂದು ಆರೋಪಿತ ಅಧಿಕಾರಿಯೊಬ್ಬರು ದಾಖಲೆಗಳ ಸಹಿತ ಎದುರಾದರು. ಇಲಾಖೆಯ ಅನುದಾನ ನಿರ್ವಹಣಾ ಖಾತೆ ಪುಸ್ತಕ ತೋರಿಸಿದರು. ‘ಹಾಗಾದರೆ, ತನಿಖೆ ಸುಳ್ಳೇ’ ಎಂದು ಪ್ರಶ್ನಿಸಿದೆ. ‘ಇಲ್ಲ ಸರ್.. ಸಿಬ್ಬಂದಿಗೆ ಪಾವತಿಸುವ ವೇತನ ಮತ್ತು ಕಚೇರಿ ನಿರ್ವಹಣೆಗೆ ವಿನಿಯೋಗಿಸಲಾಗಿದೆ. ಆದರೆ, ಚಿಕ್ಕ ಪುಟ್ಟ ವೆಚ್ಚಕ್ಕೆ ಕಡತ ನಿರ್ವಹಣೆ ಮಾಡಿಲ್ಲ. ಇದನ್ನೇ ಮೇಲಧಿಕಾರಿಗಳಿಗೆ ತಿಳಿಸಿ ಆಗದ ಇಲಾಖೆ ಸಿಬ್ಬಂದಿ ಪಿತೂರಿ ನಡೆಸಿದ್ದಾರೆ. ಈ ತನಿಖೆಯಿಂದ ನನಗೇನೂ ಶಿಕ್ಷೆ ಆಗುವುದಿಲ್ಲ, ಏಕೆಂದರೆ ತನಿಖೆ ವೇಳೆ ನಾನು ವರದಿ ನೀಡಿದ್ದೇನೆ. ಆದರೆ, ಪತ್ರಿಕೆಗಳಲ್ಲಿ ಹೆಸರು ಹಾಕಿ ನನ್ನ ಚಾರಿತ್ರ್ಯ ವಧೆ ಮಾಡಲಾಗುತ್ತಿದೆ’ ಎಂದು ಅಲವತ್ತುಕೊಂಡರು.

ಪ್ರಸಕ್ತ ವರ್ಷದಲ್ಲಿ 64 ಮಂದಿಗೆ ಮಲೇರಿಯಾ, 43 ಡೆಂಗಿ, 39 ಜನರಿಗೆ ಚಿಕೂನ್ ಗುನ್ಯ ದೃಢಪಟ್ಟಿದೆ ಎಂಬುದಾಗಿ ಜಿಲ್ಲಾ ಆಶ್ರಿತ ರೋಗವಾಹಕಗಳ ನಿಯಂತ್ರಣಾಧಿಕಾರಿ ಕಚೇರಿ ನೋಟಿಸ್ ಬೋರ್ಡಿನಲ್ಲಿ ರಾರಾಜಿಸುತ್ತಿದೆ. ಈ ಅಂಕಿಅಂಶವನ್ನು ಅವಲೋಕಿಸಿದರೆ ಜಿಲ್ಲೆಯ ಆಸ್ಪತ್ರೆಗಳ ಸ್ಥಿತಿಗತಿ ಕಂಡು ಮರುಗಬೇಕೋ, ನಗಬೇಕೋ ಅನ್ನಿಸುತ್ತದೆ. ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಆಗಿರುವಷ್ಟು ಭ್ರಷ್ಟಾಚಾರ ಮತ್ಯಾವ ಇಲಾಖೆಯಲ್ಲೂ ಆಗಿಲ್ಲ. ಅದಕ್ಕೆ ಕೆಲವೊಂದು ಪೂರಕ ದಾಖಲೆಗಳು ಸಿಕ್ಕಿವೆ. ಮುಖವಾಡ ಧರಿಸಿರುವ ಅಧಿಕಾರಿಗಳೇ ಹೆಚ್ಚು. ಅವರ ಅಸಲಿತನ ಗೊತ್ತಿದ್ದರೂ, ಪೂರಕ ದಾಖಲೆಗಳಿಲ್ಲದೇ ಬಡಪಾಯಿ ಪತ್ರಕರ್ತರು ಬಾಯಿ ಬಿಡುವಂತಿಲ್ಲ, ಬರೆಯುವಂತಿಲ್ಲ! ಮಹತ್ವದ ಹುದ್ದೆ ಅಲಂಕರಿಸಿರುವ ಕೆಲ ವೈದ್ಯರು ಪುಂಡ ಪೋಕರಿಗಳ ತಂಡದೊಂದಿಗೆ ಸಖ್ಯ ಬೆಳೆಸಿಕೊಂಡು ಪ್ರಶ್ನಿಸು ವವರ ವಿರುದ್ಧ ಛೂ ಬಿಡುತ್ತಾರೆ. ಪತ್ರಕರ್ತರನ್ನೂ ಬಗ್ಗು ಬಡಿಯುವುದು ಅವರಿಗೆ ಗೊತ್ತಿದೆ! ವೃತ್ತಿ- ಪ್ರವೃತ್ತಿ ಬದುಕಿಗೆ ಒಂದ ಕ್ಕೊಂದು ಸಂಬಂಧ ಇಲ್ಲದಂತಹ ವ್ಯತಿರಿಕ್ತ ಮನಸ್ಥಿತಿಯ ಕೆಲ ವೈದ್ಯರು ಆರೋಗ್ಯ ಇಲಾಖೆಯಲ್ಲಿ ತುಂಬಿಕೊಂಡಿರುವುದರಿಂದ ಇಲಾಖೆ ರೋಗಗ್ರಸ್ತವಾಗಿದೆ. ಅಧೀನ ಅಧಿಕಾರಿ ಭ್ರಷ್ಟಾಚಾರದಡಿ ವಿಚಾರಣೆ ಎದುರಿಸುತ್ತಿದ್ದರೂ, ಮಾಹಿತಿ ಇಲ್ಲ ಎಂದು ಪತ್ರಕರ್ತರಿಗೆ ಜವಾಬು ನೀಡುವ ಹಿರಿಯ ಅಧಿಕಾರಿಗಳು ಅಲ್ಲಿ ಸಂತುಷ್ಟವಾಗಿ ಪಗಾರ ಪಡೆದು ಬದುಕುತ್ತಿದ್ದಾರೆ! ಒಬ್ಬೊಬ್ಬ ವೈದ್ಯರು ಒಬ್ಬೊಬ್ಬ ರಾಜಕಾರಣಿಗಳ ಆಪ್ತ ವಲಯದಲ್ಲಿ ಇದ್ದಾರೆ. ಹಾಗಾಗಿ, ವೈದ್ಯರುಗಳ ಮಧ್ಯೆ ಪ್ರತಾಪ-ಪ್ರತಿಷ್ಠೆ ಕುರಿತ ಪೈಪೋಟಿಯೂ ಇದೆ.

2018-19ನೇ ಸಾಲಿನಲ್ಲಿ ಯಾದಗಿರಿ ಜಿಲ್ಲಾ ಪಂಚಾಯಿತಿ ಒಟ್ಟು 508 ಕೋಟಿ ರು. ಅನುದಾನ ನಿಗದಿಪಡಿಸಿದೆ. ಅದರಲ್ಲಿ 274 ಕೋಟಿಯನ್ನು ವೇತನ ವೆಚ್ಚವಾಗಿಸಿದೆ. ಉಳಿದ 234 ಕೋಟಿಯನ್ನು ಅಭಿವೃದ್ಧಿಗೆ ಮೀಸಲಿಟ್ಟಿದೆ. ಆದರೆ ಸದ್ಯ ಆರ್ಥಿಕ ವರ್ಷ ಮುಗಿದಿದ್ದರೂ 234 ಕೋಟಿ ಅನುದಾನ ಬಳಸಿ ಎಲ್ಲಿ ಯಾದರೂ ಅಭಿವೃದ್ಧಿ ಕಾಮಗಾರಿ ಜನಪರವಾಗಿ ನಿರ್ಮಿಸಲಾಗಿದೆಯೇ ಎಂಬುದನ್ನು ತೋರಿಸಲಿ ಎಂದು ಯಾರು ಬೇಕಾದರೂ ಸವಾಲು ಹಾಕಬಹುದು, ಹಾಗಿದೆ ಪರಿಸ್ಥಿತಿ. ಈ 234 ಕೋಟಿ ಎಲ್ಲಿ ಹೋಯಿತು? ಧ್ವನಿ ಎತ್ತುವವರೇ ಇಲ್ಲ! ಭ್ರಷ್ಟಾಚಾರದ ಪರಾಕಾಷ್ಠೆ ಎಂದರೆ, 400 ಕೋಟಿ ಬಜೆಟ್ ಮಂಡಿಸುವ ನಗರಸಭೆ, ನೆತ್ತಿ ಸುಡುವ ಬಿಸಿಲಿನಿಂದ ಒಂದಷ್ಟು ದಣಿವಾರಿಸಿಕೊಳ್ಳಲು ನಾಲ್ಕೈದು ಕಿಲೋ ಮೀಟರ್ ಉದ್ದಗಲದ ನಗರದಲ್ಲಿ 30ಬೈ40 ವಿಸ್ತೀರ್ಣದ ಒಂದು ಉದ್ಯಾನವನ್ನೂ ಅಭಿವೃದ್ಧಿಪಡಿಸದೇ ಇರುವುದು. ಸಮೃದ್ಧ ಜಲ ಸಂಪತ್ತು ಇದ್ದರೂ, ಬೇಸಿಗೆಯಲ್ಲಿ ಹಳ್ಳಿಹಳ್ಳಿಗಳು ಹನಿ ನೀರಿಗಾಗಿ ಪರಿತಪಿಸುವುದು ತಪ್ಪಿಲ್ಲ. ಕೃಷ್ಣಾ, ಭೀಮೆಯ ಒಡಲಿಗೆ ಪೈಪ್‌ಲೈನ್ ಮಾಡಿದರೆ ಸಮಸ್ತ ಜಿಲ್ಲೆಗೆ ಕುಡಿಯುವ ನೀರು ಒದಗಿಸ ಬಹುದು ಎಂಬ ಸತ್ಯ ಗೊತ್ತಿದ್ದರೂ, ಕುಡಿಯುವ ನೀರಿಗಾಗಿ ಪುರಪಿತೃಗಳು ಸರಕಾರದ ಮುಂದೆ ಹೆಚ್ಚುವರಿ ಅನುದಾನಕ್ಕೆ ಅಂಗಲಾಚುತ್ತಾರೆ. ನೂರಾರು ಕಿಲೋ ಮೀಟರ್‌ಗಳಿಂದ ನೀರು ತಂದು ಜನರ ದಾಹ ನೀಗಿಸುತ್ತಿರುವ ನಿದರ್ಶನಕ್ಕೆ ನೆರೆಯ ಜಿಲ್ಲೆ ವಿಜಯಪುರ ಸಾಕ್ಷಿಯಾಗಿದೆ. ಆದರೆ ಎರಡು ಜೀವಂತ ನದಿಗಳನ್ನು ಇಟ್ಟುಕೊಂಡು ಹನಿ ನೀರಿಗಾಗಿ ಇಲ್ಲಿನ ಜನರು ಬೊಬ್ಬೆ ಹೊಡೆಯುವುದು ಮಾತ್ರ ತಪ್ಪಿಲ್ಲ. ಜಿಲ್ಲೆಯ ಅನಭಿವೃದ್ಧಿಯಿಂದ ಬೇಸತ್ತ ಯಾದಗಿರಿಯ ಸಾತ್ವಿಕ ಮುಖಂಡರೊಬ್ಬರು ಎಸ್.ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರದಲ್ಲಿನ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲರ ಮುಂದೆ ನಿಂತು ಗೋಳು ತೋಡಿಕೊಂಡರಂತೆ. ಆಗ ಸಚಿವರು,‘ನಿಮ್ಮ ಶಾಸಕರು ತನಿಖೆ ಮಾಡುವಂತೆ ಒಂದು ಮನವಿ ಕೊಡಲಿ. ಅಲ್ಲಿನ ಸಿಇಒ ಅವರನ್ನೇ ಮೊದಲು ಅಮಾನತು ಮಾಡುತ್ತೇನೆ’ ಎಂದು ಗುಡುಗಿದರಂತೆ. ಶಾಸಕರಿಗೆ ಈ ಕುರಿತು ಮೊದಲೇ ಮನವಿ ಕೊಟ್ಟು ಸಾಕುಬೇಕಾಗಿದ್ದ ಅವರು ತೆಪ್ಪಗೆ ಮನೆ ಸೇರಿದ್ದಾರೆ.

ಜನಪ್ರತಿನಿಧಿಗಳಿಗೆ ತಮ್ಮ ಅಧಿಕಾರ ವ್ಯಾಪ್ತಿ ಕುರಿತು ಅರಿವು ಇಲ್ಲದೇ ಇದ್ದಾಗ ಇಂಥಾ ಭ್ರಷ್ಟಾಚಾರ ಮಿತಿ ಮೀರುತ್ತವೆ. ಜನಪ್ರತಿನಿಧಿಗಳ ಜ್ಞಾನ ಭಂಡಾರ ಅರಿತ ಅಧಿಕಾರಿಗಳು ಶಾಸಕ, ಸಚಿವರಿಗೆ ಚಳ್ಳೆಹಣ್ಣು ತಿನ್ನಿಸುತ್ತಾರೆ. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಆಗುತ್ತಿರುವುದು ಇದೇ ಎಂಬುದನ್ನು ಬೇರೆ ಹೇಳಬೇಕಿಲ್ಲ. ಉದಾಹರಣೆಗೆ, ಯಾದಗಿರಿ ಜಿಲ್ಲೆಯಲ್ಲೇ ಹೊರಗುತ್ತಿಗೆಯ ಉಪನ್ಯಾಸಕನೊಬ್ಬನಿಗೆ ನಿಯಮ ಉಲ್ಲಂಘಿಸಿ ವಸತಿ ಶಾಲೆಯೊಂದರ ಪ್ರಾಂಶುಪಾಲರ ಹುದ್ದೆ ನೀಡಲಾಗಿದೆ(ಮೋಟ್ನಳ್ಳಿ ಮೊರಾರ್ಜಿ ಶಾಲೆ). ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿ, ವಿಚಾರಣೆ ಎದುರಿಸಿ, ಜಾಮೀನು ಪಡೆದ ನಂತರವೂ, ಆತ ಅದೇ ಹುದ್ದೆಯಲ್ಲಿ ಮುಂದುವರಿದಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರಾಂಶುಪಾಲನ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ಮೂಲ ಕಡತವೇ ಕಳೆದುಹೋಗಿದೆ!

ಪೊಲೀಸ್ ಇಲಾಖೆ ಎಷ್ಟು ಅಸಮರ್ಥವಾಗುತ್ತಿದೆ ಎಂಬುದನ್ನು ವಾರ್ಷಿಕವಾಗಿ ದಾಖಲಿಸುತ್ತಿರುವ ಅಪರಾಧ ಪ್ರಕರಣಗಳ ಪಟ್ಟಿ ಢಾಳಾಗಿ ಹೇಳುತ್ತದೆ. ಎಷ್ಟು ಪ್ರಕರಣಗಳನ್ನು ಭೇದಿಸಲಾಗಿದೆ ಎಂಬುದನ್ನು ಪೊಲೀಸರು ಸಾರ್ವಜನಿಕರಿಗೆ ಬಹಿರಂಗಪಡಿಸುವುದಿಲ್ಲ. ಎಲ್ಲವೂ ಕಾನ್‌ಫಿಡೆನ್ಷಿಯಲ್ (ಗೌಪ್ಯ). ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ಕಲಬುರ್ಗಿ, ಕೊಪ್ಪಳ, ಬಳ್ಳಾರಿ, ಯಾದಗಿರಿ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ವಂಚನೆ ಪ್ರಕರಣಗಳು ಸಾವಿರ ಲೆಕ್ಕ ದಾಟಿವೆ. ಆದರೆ, ಅವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪೊಲೀಸರು ಭೇದಿಸಿದ್ದಾರೆ? ಅತ್ಯಾಚಾರ ಪ್ರಕರಣಗಳು ರಾಜೀ-ಸಂಧಾನಗಳಲ್ಲಿ ಪರ್ಯವಸನಗೊಳ್ಳುತ್ತಿರುವುದಂತೂ ವಿಪರ್ಯಾಸ!

ಗುರುಮಠಕಲ್ ತಾಲೂಕಿನ ಎಲ್ಹೇರಿಯಲ್ಲಿ 18 ವರ್ಷದ ಲಂಬಾಣಿ ಯುವಕನೊಬ್ಬ ಪಟ್ಟಭದ್ರರ ಮನೆಯಲ್ಲಿ ಜೀತ ಮಾಡಿಕೊಂಡಿದ್ದ. ಆತನಿಗೆ ಮದುವೆಯೂ ನಿಶ್ಚಿತವಾಗಿತ್ತು. ದಿಢೀರ್ ಅಂತ ಯುವಕ ನಾಪತ್ತೆಯಾದ! ಮಗನ ಕಣ್ಮರೆಯಿಂದ ವೃದ್ಧ ಪಾಲಕರು ವಿಲವಿಲ ಒದ್ದಾಡಿದರು. ಠಾಣೆ ಮೆಟ್ಟಿಲೇರಿದರು. ಅವರಿಗೆ ಲಂಬಾಣಿ ಸಮುದಾಯದ ಶಿಕ್ಷಣ ಸಂಸ್ಥೆ ಮುಖ್ಯಸ್ಥರೊಬ್ಬರು ನೆರವಾದರು. ತನಿಖೆ ಶುರುವಾಯಿತು. ಜಾಗೃತರಾದ ಪಟ್ಟಭದ್ರರು ಪ್ರಬಲರಾದರು. ತನಿಖೆಯ ದಿಕ್ಕು ತಪ್ಪಿತು. ಸಹಿಸಲಾಗದೇ ವೃದ್ಧರನ್ನು ಭೇಟಿ ಮಾಡಿದೆ. ಕಣ್ಣೀರಧಾರೆ ಕೋಡಿಯಾಯಿತೇ ವಿನಃ ಯಾವ ಪ್ರತಿಕ್ರಿಯೂ ಸಿಗಲಿಲ್ಲ. ಆ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರನ್ನು ವಿಚಾರಿಸಿದಾಗ ಜೀವಬೆದರಿಕೆ ಹಾಕಿದ್ದಾರೆ ಎಂಬುದಾಗಿ ಅಳಲು ತೋಡಿ ಕೊಂಡರು. ಯುವಕ ಊರು ತೊರೆದಿದ್ದರೆ, ಈ ಸಂವಹನ ಕ್ರಾಂತಿ ಯುಗದಲ್ಲಿ ಪೋಷಕರಿಗೆ ಒಂದು ಕರೆ ಮಾಡುತ್ತಿರಲಿಲ್ಲವೇ? ಎಂಬುದು ಎಲ್ಹೇರಿ ಗ್ರಾಮಸ್ಥರ ಪ್ರಶ್ನೆ. ಆದರೆ, ಇಲಾಖೆಯಲ್ಲಿ ಈ ಪ್ರಕರಣ ‘ಬಿ’ ರಿಪೋರ್ಟ್ ಹಂತದಲ್ಲಿದೆ. ತನಿಖಾಧಿಕಾರಿ ರಂಗಪ್ಪ ಬೆಂಗಳೂರಿಗೆ ವರ್ಗಾವಣೆಗೊಂಡಿದ್ದಾರೆ. ‘ ಹೈದರಾಬಾದ್ ಕರ್ನಾಟಕದಲ್ಲಿ ವಂಚನೆ ಪ್ರಕರಣ ಏಕೆ ಹೆಚ್ಚುತ್ತಿವೆ?’ ಎಂಬು ದಾಗಿ ಇಲಾಖೆಯ ಪೇದೆಯೊಬ್ಬರನ್ನು ಪ್ರಶ್ನಿಸಿದೆ. ‘ವಂಚನೆ ನಡೆಸುತ್ತಿರುವುದು ಸಂಪೂರ್ಣ ತೆಲಂಗಾಣದ ಆರೋಪಿಗಳ ತಂಡ’ ಎಂದು, ಅದೊಂದು ಸಾಮಾನ್ಯ ವಿಷಯ ಎಂಬಂತೆ ಹೇಳಿದರು. ‘ವಂಚನೆಯೇ ಬದುಕಾಗಿಸಿಕೊಂಡಿರುವ ತಂಡ ದೊಂದಿಗೆ ತೆಲಂಗಾಣದ ಪೊಲೀಸರು ಕೈಜೋಡಿಸಿದ್ದಾರೆ. ಜನರನ್ನು ವಂಚಿಸಿ ದೋಚುವ ನಗ, ನಾಣ್ಯದಲ್ಲಿ ಪೊಲೀಸರಿಗೂ ಪಾಲು ಹೋಗುತ್ತದೆ. ಆರೋಪಿಗಳನ್ನು ಬಂಧಿಸಲು ಸಾಧಾರಣ ಅಧಿಕಾರಿಗಳು ಹೋದರೆ ತೆಲಂಗಾಣದಲ್ಲಿ ಅವರಿಗೊಂದು ಗತಿ ಕಾಣಿಸುತ್ತಾರೆ. ಅದೇನಿದ್ದರೂ, ಐಪಿಎಸ್ ಅಧಿಕಾರಿಗಳ ಹಂತ ದಲ್ಲಿ ತನಿಖೆ ನಡೆದರೆ ಮಾತ್ರ ಸಾಧ್ಯ. ಆದರೆ, ಈ ಹಂತದ ತನಿಖೆ ಗೆ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಹುದ್ದೆಯಲ್ಲಿರುವವರು ಆಸಕ್ತಿ ತೋರುವುದಿಲ್ಲ’ ಎಂದರು.

ಹೈದರಾಬಾದ್ ಕರ್ನಾಟದ ಜಿಲ್ಲೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ಯಾವ ಸಂಘಟನೆಗಳೂ ಪ್ರಬಲವಾಗಿ ಎದೆಗೊಡುತ್ತಿಲ್ಲ. ಕೆಲವೊಂದು ಸಂಘಟನೆಗಳು ಸಾಂಕೇತಿಕವಾಗಿ ಪ್ರತಿಭಟಿಸಿ, ಅಧಿಕಾರಿಗಳಿಗೆ ಪ್ರೇಮಪತ್ರದಂತೆ ಮನವಿ ಸಲ್ಲಿಸುತ್ತಿವೆ. ಅವುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ವರದಿಗಾರರಿಗೆ ಕರೆ ಮಾಡುತ್ತವೆ. ಪ್ರಕಟವಾದ ಮೇಲೆ ಏನೋ ಸಾಧಿಸಿದಂತೆ ಹಲ್ಲು ಗಿಂಜುತ್ತವೆ!

ಮನೆಗಳ ಬಳಿಗೆ ಶಿಕ್ಷಣ ಹೋಗಬೇಕೇ ಹೊರತು ಶಿಕ್ಷಣ ಸಂಸ್ಥೆಗಳಲ್ಲ

ಗುರು ಅನಾದಿ ಕಾಲದಿಂದಲೂ ಪೂಜ್ಯನೀಯ ಗೌರವಕ್ಕೆ ಪಾತ್ರನಾದವನು. ಜನ ವಿದ್ಯೆ ಕಲಿಸುವ ಗುರು ಮತ್ತು ಶಾಲೆಗಳನ್ನು ದೇವರು ಮತ್ತು ದೇವಸ್ಥಾನಗಳೆಂದೇ ಭಾವಿಸಿದ್ದರು. ಆ ಮಟ್ಟಿಗೆ ಅಂದಿನಿಂದ ಇಂದಿನವರೆಗೂ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳು ತಮ್ಮ ವೃತ್ತಿ ಪಾವಿತ್ರ್ಯವನ್ನು ತಕ್ಕಮಟ್ಟಿಗೆ ಉಳಿಸಿಕೊಂಡು ಬಂದಿವೆ ಅಷ್ಟೇ. ಅದರಲ್ಲೂ ಶಿಕ್ಷಕರಿಂದ ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳಗಳು, ಕೆಲಸದ ಅವಧಿಯಲ್ಲಿಯೇ ಮದ್ಯಪಾನ, ಟ್ಯೂಶನ್ ಲಾಬಿ, ಪ್ರಶ್ನೆಪತ್ರಿಕೆಗಳ ಸೋರಿಕೆ, ಬಡ್ಡಿ ವ್ಯವಹಾರ ಶಿಕ್ಷಕರ ಗೌರವವನ್ನು ಸಮಾಜದಲ್ಲಿ ಮುಕ್ಕಾಗಿಸಿವೆ. ಅದಕ್ಕೆ ಇತ್ತೀಚೆಗೆ ಇನ್ನೊಂದು ಸೇರ್ಪಡೆಯೆಂದರೆ ಕೆಲ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳು ದಾಖಲಾತಿ ಹೆಚ್ಚಿಸಿಕೊಳ್ಳಲು ಹಿಡಿಯುವ ನಿಕೃಷ್ಟ ಮಾರ್ಗ.

ಏಪ್ರಿಲ್-ಮೇ ತಿಂಗಳುಗಳು ಪ್ರಾರಂಭವಾಗುತ್ತಿರುವಂತೆಯೇ ದಾಖಲಾತಿಗಾಗಿ ಕೆಲ ಸಂಸ್ಥೆಗಳು ಮತ್ತು ಶಿಕ್ಷಕರು ಹಿಡಿಯುವ ಮಾರ್ಗ ಕಂಡರೆ ಅಸಹ್ಯವೆನ್ನಿಸದೇ ಇರುವುದಿಲ್ಲ. ರಾಜಕಾರಣಿಗಳು ಎಲೆ ಅಡಿಕೆ ಕೈಯಲ್ಲಿ ಹಿಡಿದು ಮನೆ ಮನೆ ಅಲೆದು ಓಟು ಕೇಳುವುದನ್ನು ಮೀರಿಸುವಂತೆ ಅಡ್ಮಿಶನ್ ಅರ್ಜಿ ಹಿಡಿದು ಮಕ್ಕಳ ಮನೆಗಳಿಗೆ ಸುತ್ತಲಾರಂಭಿಸಿದ್ದಾರೆ. ಸಮಯ ಸಂದರ್ಭವಿಲ್ಲದೆ ರಾತ್ರಿ ಹತ್ತು ಗಂಟೆಯವರೆಗೂ ಮನೆ ಮನೆಗೂ ತಿರುಗಿ, ಗೋಗರೆದು ದಾಖಲಾತಿ ಮಾಡಿಸಿಕೊಳ್ಳುತ್ತಿದ್ದಾರೆಂದರೆ ಅವರ ಮನಃಸ್ಥಿತಿಯ ಬಗ್ಗೆ ಹಾಗೂ ಅವರ ಸಂಸ್ಥೆಗಳಲ್ಲಿನ ಗುಣಮಟ್ಟದ ಬಗ್ಗೆ ಅನುಮಾನ ಬಾರದೇ ಉಳಿಯುವುದಿಲ್ಲ. ಈ ಕುರಿತು ಪೋಷಕರೂ ಯೋಚಿಸಬೇಕಿದೆ, ಯಾಕೆಂದರೆ ಉತ್ತಮ ಗುಣಮಟ್ಟದ ಬ್ರ್ಯಾಂಡೆಡ್ ಸರಕನ್ನು ಮಾರಲು ಕಂಪನಿ ಎಂದಿಗೂ ಮನೆ ಬಾಗಿಲಿಗೆ ಬಂದು ಬೇಡುವುದಿಲ್ಲ.

ಕೆಲ ಕಾಲೇಜುಗಳಂತೂ ಏಳೆಂಟು ತಿಂಗಳುಗಳ ಮುಂಚೆಯೇ ಅದಕ್ಕೆಂದೇ ಕೆಲ ಸಿಬ್ಬಂದಿ ನೇಮಿಸಿಕೊಡು ತಮ್ಮ ಶಾಲಾ ಕಾಲೇಜುಗಳ ಮಾರುಕಟ್ಟೆ ಪ್ರಚಾರ ಆರಂಭಿಸುತ್ತವೆ. ಒಬ್ಬ ವಿಧ್ಯಾರ್ಥಿಯ ದಾಖಲಾತಿಗೆ ಸುಮಾರು ಐದರಿಂದ ಹತ್ತು ಸಾವಿರ ರು.ವರೆಗೂ ಕಮಿಷನ್ ನೀಡುವ ಸಂಪ್ರದಾಯ ಇದೆ

ವಿದ್ಯಮಾನ

ಶ್ರೀನಿವಾಸಮೂರ್ತಿ ಎನ್. ಸುಂಡ್ರಹಳ್ಳಿ

vveditoped@gmail.com

ಯೆಂದರೆ ಪೋಷಕರಿಂದ ಇನ್ನಾವ ಮಟ್ಟದಲ್ಲಿ ದೋಚುತ್ತಿರಬಹುದು ಎಂದು ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಈ ಏಜೆಂಟ್‌ಗಳ ಮೂಲಕ ದಾಖಲಾತಿ ಮಾಡುವುದನ್ನಾದರೂ ಒಂದು ವೇಳೆ ಸಹಿಸಬಹುದು. ಆದರೆ ಗ್ರಾಮೀಣ ಭಾಗಗಳಲ್ಲಿ ಶಿಕ್ಷಕರನ್ನೇ ಮನೆ ಮನೆ ಅಲೆಯಿಸುವ ಕಾರ್ಯಕ್ಕೆ ಬಳಸಿಕೊಳ್ಳುತ್ತಿರುವುದು ಮಾತ್ರ ಹೇಸಿಗೆ ಹುಟ್ಟಿಸುವಂತಹದ್ದು. ಇದುವರೆಗೂ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟುಗಳ ಭರ್ತಿಯಲ್ಲಿ ನಡೆಯುತ್ತಿದ್ದ ದಂಧೆ ಈಗ ಪಿಯು ಮತ್ತು ಪದವಿ ರಂಗದಲ್ಲಿಯೂ ಕೂಡ ಶುರುವಾಗಿದೆ. ಸಂಸ್ಥೆ-ಸಂಸ್ಥೆಗಳ ನಡುವೆ, ಶಿಕ್ಷಕ-ಶಿಕ್ಷಕರ ನಡುವೆ ಅನಾರೋಗ್ಯಕರ ಪೈಪೋಟಿ ನಿರ್ಮಾಣವಾಗಿದೆ. ಇನ್ನೂ ಮುಂದುವರಿದು ಬಿಲ್ ಪುಸ್ತಕವನ್ನೂ ಶಿಕ್ಷಕರ ಕೈಯಲ್ಲಿ ವಿದ್ಯಾರ್ಥಿಗಳಿರುವ ಮನೆಗಳಿಗೇ ಕಳುಹಿಸಿಕೊಡುವ ಸಂಸ್ಥೆಗಳೂ ಇವೆ. ಅಲ್ಲಿಯೇ ಕೊಟ್ಟಷ್ಟು ಶುಲ್ಕಕ್ಕೆ ದಾಖಲಾತಿ ಮಾಡಿಕೊಂಡು ಬರುತ್ತಿದ್ದಾರೆ. ಈ ಪದ್ಧತಿ ಮುಂದುವರಿದದ್ದೇ ಆದಲ್ಲಿ ಜನ ಮಾನಸದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಕರ ಕುರಿತು ಇನ್ನಾವ ಭಾವನೆ ಉಳಿಯಬಹುದು ಎಂದು ಯೋಚಿಸಬೇಕಿದೆ.

ಖಾಸಗಿ ಸಂಸ್ಥೆಗಳು ಶಿಕ್ಷಕರುಗಳಿಗೆ ಕೊಡುವುದು ಮೊದಲೇ ಪುಡಿಗಾಸಿನ ಸಂಬಳ. ಖಾಸಗಿ ಸಂಸ್ಥೆಗಳ ಮಾಲೀಕರ ಮುಲಾಜಿಗೆ ಒಳಗಾಗಿ ಮನೆ ಮನೆಗೂ ಅಲೆಯುವ ಈ ಶಿಕ್ಷಕರನ್ನು ಭಿಕ್ಷುಕರಿಗಿಂತಲೂ ಕಡೆಗಣಿಸಿ ಕಾಣುತ್ತಿದ್ದಾರೆ ಪೋಷಕರು. ಪರಿಸ್ಥಿತಿ ಹೀಗಿದ್ದರೂ ಕೂಡ ಶಿಕ್ಷಕರು ಏನೂ ಮಾಡುವಂತಿಲ್ಲ, ದನಿ ಎತ್ತಿದರೆ ಯಾವುದೇ ಮುನ್ಸೂಚನೆ ಇಲ್ಲದೆ ಆ ಕ್ಷಣದಿಂದಲೇ ಕೆಲಸದಿಂದ ಬಿಡುಗಡೆ ಮಾಡುತ್ತಾರೆ. ಬೇರೆ ಸಂಸ್ಥೆಗೆ ಹೋದರೆ ಅಲ್ಲಿಯೂ ಇದೇ ಕರ್ಮ. ಒಂದು ರೀತಿ ಅನಿಶ್ಚಿತತೆಯ ಬದುಕು. ಖಾಸಗಿ ಶಾಲಾ ಕಾಲೇಜುಗಳಲ್ಲಿನ ಶಿಕ್ಷಕರ ಬದುಕು ಈ ಎಲ್ಲದರಿಂದ ಯಾವುದೇ ಭದ್ರತೆಯಿಲ್ಲದಂತಾಗಿದೆ.

ಹತ್ತನೇ ತರಗತಿ ಮತ್ತು ಪಿಯುಸಿಯ ಫಲಿತಾಂಶವನ್ನು ಕೆಲ ಖಾಸಗಿ ಸಂಸ್ಥೆಗಳು ಎಷ್ಟು ಉಪಾಯದಲ್ಲಿ ಕರಪತ್ರಗಳಲ್ಲಿ ಮುದ್ರಿಸಿ ಹಂಚುತ್ತಾರೆ ಎಂದರೆ, ಪರೀಕ್ಷೆಗೆ ಕುಳಿತಿದ್ದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಕರ ಪತ್ರಗಳಲ್ಲಿ ತೋರಿಸುವುದೇ ಇಲ್ಲ. ಪಾಸಾದ ವಿದ್ಯಾರ್ಥಿಗಳ ಸಂಖ್ಯೆ, ಡಿಸ್ಟಿಂಕ್ಷನ್ ಪಡೆದವರ ಸಂಖ್ಯೆ, ನಮ್ಮ ಕಾಲೇಜಿನ ಟಾಪರ್‌ಗಳು...ಎಂದು ಒಂದಿಷ್ಟು ಫೋಟೋ ಹಾಕಿ ಪ್ರಚಾರ ಆರಂಭಿಸುತ್ತವೆ. ವಾಸ್ತವವಾಗಿ ಫೇಲ್ ಆದವರ ಸಂಖ್ಯೆಯನ್ನು ಸಮಾಜಕ್ಕೆ ತೋರಿಸುವುದೇ ಇಲ್ಲ. ಈ ಬಗ್ಗೆ ಸಮಾಜವೂ ಪ್ರಶ್ನಿಸುವುದಿಲ್ಲ. ಉದಾಹರಣೆಗೆ 250 ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ. ಪಾಸಾಗಿರುವುದು ಕೇವಲ 120 ರಿಂದ 130, ಫಲಿತಾಂಶ ಶೇ 50 ಅಷ್ಟೇ. ಈ ನಿಟ್ಟಿನಲ್ಲಿ ಆಗುತ್ತಿರುವ ವಂಚನೆಯನ್ನು ತಪ್ಪಿಸಲು ಪ್ರೌಢಶಿಕ್ಷಣ ಮಂಡಳಿ ಮತ್ತು ಪಿಯು ಮಂಡಳಿಗಳು ತಾವೇ ಎಲ್ಲಾ ಶಾಲಾ ಕಾಲೇಜುಗಳ ಶೇಕಡಾವಾರು ಫಲಿತಾಂಶವನ್ನು ವೆಬ್ ಸೈಟ್‌ಲ್ಲಿಯೋ ಅಥವಾ ಪತ್ರಿಕೆಗಳಿಗೋ ಬಿಡುಗಡೆ ಮಾಡಿದರೆ ಉತ್ತಮವಾಗಿರುತ್ತದೆ.

ನಳಂದ, ಓದಂತಪುರಿ, ತಕ್ಷಶಿಲ, ಕಂಚಿ ಮುಂತಾದುವು ಪ್ರಾಚೀನ ಕಾಲದಲ್ಲಿ ಹೆಸರಾಂತ ಶಿಕ್ಷಣ ಸಂಸ್ಥೆಗಳೆನಿಸಿಕೊಂಡಿದ್ದವು. ಇಲ್ಲಿ ಓದಲೆಂದು ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ನಳಂದದಲ್ಲಿ ಚೀನಾದ ಶ್ರೇಷ್ಠ ಬೌದ್ಧ ವಿದ್ವಾಂಸರಾದ ಹ್ಯುಯೆನ್‌ತ್ಸಾಂಗ್, ಇತ್ಸಿಂಗ್‌ರು ಅಧ್ಯಯನ ನಡೆಸಿದ್ದರು. ಇಲ್ಲಿದ್ದ ಶಿಸ್ತು, ಸಂಯಮ ಹಾಗೂ ರತ್ನೋದದಿ, ರತ್ನರಂಜಕ, ರತ್ನಸಾಗರ ಎಂಬ ಶ್ರೇಷ್ಠ ಗ್ರಂಥಾಲಯಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು. ಮುಖೋದ್ಗತ ಪರೀಕ್ಷೆ ಇಲ್ಲದೆ ಯಾವೊಬ್ಬ ವಿದ್ಯಾರ್ಥಿಗೂ ಪ್ರವೇಶ ನೀಡುತ್ತಿರಲಿಲ್ಲ. ಚಂದ್ರಪಾಲ, ಪ್ರಭಾಮಿತ್ರ, ಜಿನಮಿತ್ರ ಎಂಬ ಹೆಸರಾಂತ ಪಂಡಿತರಿಂದ ದೊರೆಯುತ್ತಿದ್ದ ಪಾಂಡಿತ್ಯ ಪೂರ್ಣ ಪಾಠಗಳಿಂದಾಗಿ ವಿದ್ಯಾರ್ಥಿಗಳು ಆ ವಿದ್ಯಾಲಯಗಳಿಗೆ ಹರಿದು ಬರುತ್ತಿದ್ದರೇ ಹೊರತು ಇವರ್‍ಯಾರೂ ಮನೆ ಮನೆಗೆ ಹೋಗಿ ದಾಖಲಾತಿ ಮಾಡಿಕೊಳ್ಳುತ್ತಿರಲಿಲ್ಲ.

ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಕಾರ, ಪಾಂಡಿತ್ಯ, ಉತ್ತಮ ಫಲಿತಾಂಶ ಮತ್ತು ಶಿಸ್ತಿನ ಮೂಲಕ ವಿದ್ಯಾರ್ಥಿಗಳನ್ನು ಆಕರ್ಷಿಸಬೇಕೇ ವಿನಃ ಶಿಕ್ಷಣವನ್ನು ಮಾರುಕಟ್ಟೆಯ ಸರಕಿನಂತಾಗಿಸಿ ಮಾರುಕಟ್ಟೆಯ ಏಜೆಂಟ್‌ಗಳಂತೆ ಬೀದಿ ಬೀದಿ ತಿರುಗಾಡಿ ಗೋಗರೆವ ಮೂಲಕವಲ್ಲ. ಈ ಸ್ಥಿತಿ ಹೀಗೆಯೇ ಮುಂದುವರೆದಲ್ಲಿ ನಗರಗಳಲ್ಲಿ ಮನೆಗಳ ಮುಂದೆ “Marketing peoples are not allowed” ಎಂದು ಬೋರ್ಡು ನೇತು ಹಾಕಿಕೊಂಡಂತೆ, ದಾಖಲಾತಿ ಕೇಳಿಕೊಂಡು ಬರುವ ಶಿಕ್ಷಕರಿಗೆ ಪ್ರವೇಶವಿಲ್ಲ ಎಂದು ತೂಗು ಹಾಕಿದರೂ ಅಚ್ಚರಿ ಪಡಬೇಕಿಲ್ಲ. ‘ಈ ಶಾಲಾ ಕಾಲೇಜುಗಳು ದುಡ್ಡು ಮಾಡೋ ಕಡೆಗೆ ಗಮನ ಕೊಡೋದು ಬಿಟ್ಟು ಚೆನ್ನಾಗಿ ಪಾಠ ಮಾಡಿ ಒಳ್ಳೆ ರಿಸಲ್ಟ್ ಕೊಟ್ಟರೆ ಜನರೇ ಹುಡುಕಿಕೊಂಡು ಹೋಗಿ ಅಡ್ಮಿಷನ್ ಮಾಡಿಸುತ್ತಾರೆ, ಹೀಗೆ ಮನೆ ಮನೆ ಸುತ್ತಿ ಭಿಕ್ಷೆ ಬೇಡೋ ಪರಿಸ್ಥಿತಿಯಾದರೂ ಯಾಕೆ ಬರುತ್ತದೆ?’ ಎಂದೂ ಕೂಡ ಪೋಷಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಈ ಬಗ್ಗೆ ಶಿಕ್ಷಣ ಸಂಸ್ಥೆಗಳು ಮತ್ತು ಆ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವ ಶಿಕ್ಷಕರುಗಳು ಗಂಭೀರವಾಗಿ ಯೋಚಿಸಬೇಕು.

‘ವಿದ್ಯಾರ್ಥಿಗಳು ಶಾಲೆಗೆ ಬರಲಾಗದಿದ್ದಲ್ಲಿ ಶಾಲೆಗಳೇ ಮನೆಗಳ ಬಳಿ ಹೋಗಬೇಕು’ ಎಂದಿದ್ದರು ಸ್ವಾಮಿ ವಿವೇಕಾನಂದರು. ಸ್ವಾಮಿಗಳು ಹೇಳಿದ್ದು ಮನೆಗಳ ಸಮೀಪ ಶಾಲೆಗಳನ್ನು ತೆರೆದು ವಿದ್ಯೆ ಕಲಿಸಲೇ ಹೊರತು ದಾಖಲಾತಿಗಾಗಿ ಗೋಗರೆದು ದುಡ್ಡು ಮಾಡಲು ಅಲ್ಲ ಎಂಬುದನ್ನು ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳು ನೆನಪಿನಲ್ಲಿಟ್ಟುಕೊಳ್ಳಬೇಕು.

ಸಣ್ಣವರನ್ನು ಗೌರವಿಸುವವರೇ ದೊಡ್ಡ ಮನುಷ್ಯರು!

ಆಶ್ಚರ್ಯಕರ ವಿಷಯವೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು! ನಮಗೆಲ್ಲಾ ಗೊತ್ತಿರುವಂತೆ ಭಾರತ ಮತ್ತು ಬಾಂಗ್ಲಾದೇಶ ಇವು ಎರಡೂ ವಿಭಿನ್ನ ದೇಶಗಳು. ವಿಭಿನ್ನ ಸಂಸ್ಕೃತಿ, ವಿಭಿನ್ನ ಭಾಷೆಗಳು, ವಿಭಿನ್ನ ನಂಬಿಕೆಗಳು. ಪರಸ್ಪರರಲ್ಲಿ ಅಷ್ಟೇನೂ ಹೇಳಿಕೊಳ್ಳುವಂತಹ ಸೌಹಾರ್ದಯುತ ಸಂಬಂಧಗಳಿಲ್ಲ. ಇವೆರಡೂ ದೇಶಗಳಲ್ಲಿ ಸಾಮ್ಯತೆ ಒಂದು ಇದೆ. ಅದೇ ಆಶ್ಚರ್ಯಕರವಾದ ವಿಷಯ! ಅದೇನು ಎಂದರೆ ಎರಡೂ ದೇಶಗಳ ರಾಷ್ಟ್ರಗೀತೆಯನ್ನು ಬರೆದವರು ಒಬ್ಬರೇ! ಭಾರತ ದೇಶದ ‘ಜನಗಣ ಮನ ಅಧಿನಾಯಕ ಜಯಹೇ, ಭಾರತ ಭಾಗ್ಯವಿಧಾತ’ ಎಂಬ ಗೀತೆಯನ್ನೂ, ಬಾಂಗ್ಲಾದೇಶದ ‘ಅಮರ್ ಸೋನಾರ್ ಬಾಂಗ್ಲಾ’ ಎಂಬ ಗೀತೆಯನ್ನೂ ಬರೆದವರು ರವೀಂದ್ರನಾಥ ಟ್ಯಾಗೋರ್! ರವೀಂದ್ರನಾಥ ಟ್ಯಾಗೋರರು ಇಂತಹ ಅನೇಕ ಆಶ್ಚರ್ಯಕರ ಸಂಗತಿಗಳಿಗೆ ಕಾರಣೀಭೂತರಾಗಿದ್ದಾರೆ. ಅವುಗಳಲ್ಲಿ ಕೆಲವು ಇಲ್ಲಿವೆ. ತಮ್ಮ ಎಂಟನೆಯ ವಯಸ್ಸಿಗೆ ಕವನಗಳನ್ನು ರಚಿಸಿ, ಹದಿನಾರನೇ ವಯಸ್ಸಿಗೆ ಸುದೀರ್ಘ ಕಾವ್ಯಗಳನ್ನು ಬರೆದು ಪ್ರಕಟಿಸಿ ದರು.

ವಿನೂತನ ‘ರವೀಂದ್ರ ಸಂಗೀತ’ ಪದ್ಧತಿಯನ್ನು ಪ್ರಸಿದ್ಧಿ

ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ

vveditoped@gmail.com

ಗೊಳಿಸಿದವರು: ಭಾರತ ದೇಶಕ್ಕೆ ಮೊಟ್ಟಮೊದಲ ನೊಬೆಲ್ ಪ್ರಶಸ್ತಿ ತಂದುಕೊಟ್ಟವರು. ಅವರು ಬರೆದ ಗೀತಾಂಜಲಿ ಭಕ್ತಿ ಸಂಗೀತ ಸಂಗ್ರಹಕ್ಕೆ ನೊಬೆಲ್ ಪ್ರಶಸ್ತಿ ಸಿಕ್ಕಿತು. ಅವರು ಸೃಷ್ಟಿಸಿದ ಕಾದಂಬರಿಗಳು, ನಾಟಕಗಳು, ಕವನಗಳು ಜಗತ್ತಿನಾದ್ಯಂತ ಓದಲ್ಪಡುತ್ತವೆ. ಅವರೇ ಸ್ಥಾಪಿಸಿದ ಸುವಿಖ್ಯಾತವಾದ ಶಾಂತಿನಿಕೇತನ ಮತ್ತು ವಿಶ್ವಭಾರತಿ ವಿಶ್ವವಿದ್ಯಾಲಯಗಳಿಂದ ಅಮರರಾದವರು. ಇದೆಲ್ಲಕ್ಕಿಂತ ಮುಖ್ಯವಾದುದು ಅವರ ಮಾನವೀಯ ಗುಣಗಳು. ‘ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ಇದಿರ ಹಳಿಯಲು ಬೇಡ’ ಎಂಬುದನ್ನು ಅಕ್ಷರಶಃ ಪಾಲಿಸಿದ ವರು. ಇದಕ್ಕೆ ಕಾರಣ ಅವರ ಜೀವನದಲ್ಲಿ ನಡೆದ ಹೃದಯಸ್ಪರ್ಶಿ ಘಟನೆ. ಒಂದು ಬೆಳಗ್ಗೆ ಟ್ಯಾಗೋರರ ಸೇವಕ ಕೆಲಸಕ್ಕೆ ಹಾಜರಾಗಲಿಲ್ಲ. ಅವರು ರಾತ್ರಿ ಮನೆಯಲ್ಲಿ ಇರಲಿಲ್ಲ. ಬಾಗಿಲುಗಳೆಲ್ಲ ತೆಗೆದೇ ಇದ್ದವು. ಬಾವಿಯಿಂದ ನೀರು ಸೇದಿ ರಲಿಲ್ಲ. ಬೆಳಗಿನ ಉಪಾ ಹಾರ ಸಿದ್ಧವಾಗಿ ರಲಿಲ್ಲ. ಅಂದಿನ ಉಡುಪುಗಳನ್ನು ತೆಗೆದಿಟ್ಟಿರ ಲಿಲ್ಲ. ಟ್ಯಾಗೋರರಿಗೆ ಅಂದು ಯಾವ ಕೆಲಸವೂ ಆಗಲಿಲ್ಲ. ದಿನವಿಡೀ ಕಸಿವಿಸಿ. ಎಲ್ಲವೂ ಏರುಪೇರು. ಟ್ಯಾಗೋರರಿಗೆ ಬಹಳ ಸಿಟ್ಟು ಬಂತು. ಸೇವಕ ಬಂದ ಮೇಲೆ ಅವನಿಗೆ ಕಠಿಣ ಶಿಕ್ಷೆ ನೀಡಬೇಕೆಂದು ತೀರ್ಮಾನಿಸಿದರು. ಸಂಜೆಯ ಹೊತ್ತಿಗೆ ಸೇವಕ ಬಂದ. ಏನೂ ಮಾತನಾಡದೇ ತಲೆ ಬಾಗಿ ನಿಂತಿದ್ದ. ಅವನ ಮೌನದಿಂದ ಟ್ಯಾಗೋರರ ಸಿಟ್ಟು ಹೆಚ್ಚಾಯಿತು. ‘ಅಲ್ಲಿ ಸುಮ್ಮನೇಕೆ ನಿಂತಿದ್ದೀಯಾ? ಎಲ್ಲಿ ಸಾಯಲು ಹೋಗಿದ್ದೆ? ಅದನ್ನಾದರೂ ಬೊಗಳು’ ಎಂದು ಘರ್ಜಿಸಿದರು. ಆತ ಮೆಲುದನಿಯಲ್ಲಿ ಹೇಳಿದ. ‘ನಿನ್ನೆ ರಾತ್ರಿ ನನ್ನ ಪುಟ್ಟ ಮಗಳು ತೀರಿಕೊಂಡಳೆಂಬ ಸುದ್ದಿ ಬಂತು. ನನಗೇನು ಮಾಡಲೂ ತೋಚಲಿಲ್ಲ. ನೀವು ಮಲಗಿದ್ದಿರಿ. ನಿಮ್ಮನ್ನೆಬ್ಬಿಸುವ ಧೈರ್ಯವಾಗಲಿಲ್ಲ. ನಾನು ನನ್ನ ಊರಿಗೆ ಹೋಗಿ ಆ ಮಗುವಿನ ಅಂತ್ಯಕ್ರಿಯೆ ಮುಗಿಸಿ, ಈಗ ಮರಳಿ ಬಂದಿದ್ದೇನೆ. ನನ್ನ ತಪ್ಪನ್ನು ಕ್ಷಮಿಸಿ’ ಎಂದು ಹೇಳಿ ನಿಧಾನವಾಗಿ ಮನೆಯೊಳಕ್ಕೆ ಹೋದ. ತನ್ನ ಕಾರ್ಯದಲ್ಲಿ ತೊಡಗಿದ.

ಟ್ಯಾಗೋರರಿಗೆ ಒಮ್ಮೆಲೇ ಹೊಟ್ಟೆ ತೊಳಸಿದಂತಾಯಿತು. ಏನು ಮಾಡಲು ತೋಚಲಿಲ್ಲ. ವಿಷಯ ವೇನೆಂದು ವಿಚಾರಿಸದೆ ವಾಚಾಮಗೋಚರ ಬೈದದ್ದಕ್ಕಾಗಿ ಪಶ್ಚಾತ್ತಾಪವಾಯಿತು. ಅದೇ ಕೊನೆಯ ಬಾರಿ ಅವರು ತಮ್ಮ ಕೈಕೆಳಗೆ ಕೆಲಸ ಮಾಡುವವರ ಮೇಲೆ ರೇಗಿದ್ದು, ಕೂಗಾಡಿದ್ದು. ತನ್ನ ಕಿರಿಯ ಸೋದರನಿಗೆ ತೋರಬಹುದಾದ ಗೌರವವನ್ನು ಪ್ರೀತ್ಯಾದರಗಳನ್ನು ಅವರು ಆತನ ಮೇಲೆ ತೋರುತ್ತಿದ್ದರಂತೆ. ನಾವೂ ಟ್ಯಾಗೋರರಿಂದ ಈ ಪಾಠಗಳನ್ನು ಕಲಿಯ ಬಹುದೇ? ‘ತಮಗಿಂತ ಮೇಲಿನವರನ್ನು ಯಾರು ಬೇಕಾದರೂ ಚೆನ್ನಾಗಿ ಮಾತನಾಡಿಸಬಹುದು. ಆದರೆ ತಮಗಿಂತ ಸಣ್ಣವರನ್ನು ಗೌರವದಿಂದ ಕಾಣುವವರೇ ನಿಜವಾದ ದೊಡ್ಡ ಮನುಷ್ಯರು’ ಎಂಬ ಮಾತು ಎಷ್ಟು ನಿಜ ಅಲ್ಲವೇ?